ನಿರೀಕ್ಷಿಸುತ್ತಿದ್ದಳು. ರವಿವಾರ ಕಂಠೀರವ ಸ್ಟುಡಿಯೊ ಹುಡುಕಿಕೊಂಡು ಅದರ ಸಮೀಪ ನಡೆದುಬರುತ್ತಿದ್ದಳು. ಮಿರಿಮಿರಿ ಮಿಂಚುವ ಸ್ಕೋಡಾ ಕಾರೊಂದು ಸಮೀಪವೆ ಬಂದು ನಿಂತಿತು. ಗ್ಲಾಸಿಳಿಸಿದ ವ್ಯಕ್ತಿ, 'ಸುರಭಿ ನಿಲ್ಲಿ' ಅಂದವ ಕಾರಿಂದಿಳಿದು ಬಂದ. 'ನಾನು ರಂಗರಾವು ಅಂತ, ಸಿನಿಮಾ ಡೈರೆಕ್ಟರು. ಆವತ್ತು ನಾಯ್ಡು ಸ್ಟುಡಿಯೊದಲ್ಲಿ ನಾನೂ ಇದ್ದೆ. ಪ್ರೊಡ್ಯುಸರೊಬ್ಬರು ಸಿನಿಮಾ ಬಗ್ಗೆ ವಿಚಾರಿಸ್ತಿದ್ದರು. ನಿಮ್ಹತ್ರ ಮಾತಾಡಬೇಕು ಅಂತಿದ್ದೆ. ಅಷ್ಟರಲ್ಲಿ ನೀವು ಮ್ಯೂಜಿಕ್ ಡೈರೆಕ್ಟರ ಕಾರಲ್ಲಿ ಹೊರಟುಹೋದ್ರಿ. ಇಲ್ಲಿ ಅಕಸ್ಮಾತಾಗಿ ಕಂಡ್ರಿ, ಅದಕ್ಕೆ ನಿಲ್ಲಿಸಿದೆ.' ಅಂದವರು ಕಾರ್ಡ್ ತೆಗೆದು ನೀಡಿ 'ನನ್ಹತ್ರ ಎರಡು ಚಿತ್ರಗಳಿವೆ. ಒಂದು ಸ್ಪೆಷಲ್ ಕ್ಯಾರೆಕ್ಟರಿಗೆ ತಕ್ಕವರನ್ನ ಹುಡುಕಾಡತಿದ್ದೆ, ನೀವು ಸೂಟಾಗಬಹುದು ಅನಿಸಿತ್ತು. ಇವತ್ತು ಬ್ಯೂಸಿ ಇದೀನಿ. ನಾಳೆ ಹತ್ತುಗಂಟೆಗೆ ಅದ್ರಲ್ಲಿರೊ ವಿಳಾಸಕ್ಕೆ ಬನ್ನಿ. ಆದರೆ ಒಂದುಮಾತು; ಯಾವುದೂ ಕ್ಯಾಮರಾಟೆಸ್ಟ್ ಆದಮೇಲೇ ನಿಶ್ಚಯವಾಗೋದು.' ಅನ್ನುತ್ತ ಕಾರು ಚಾಲುಮಾಡಿದರು. ಇದನ್ನೆಲ್ಲಾ ನಂಬಲಾಗಲಿಲ್ಲ ಸುರಭಿಗೆ. ಕಾರ್ಡನ್ನು ಮತ್ತೆಮತ್ತೆ ನೋಡಿದಳು. ಬಂಗಾರಬಣ್ಣದಂಚು, ಕೆಂಪಕ್ಷರದಲ್ಲಿ ರಂಗರಾವು, ಫಿಲ್ಮ್ ಡೈರೆಕ್ಟರ್ ಅಂಡ್ ಪ್ರೊಡ್ಯೂಸರ್ ಅಂತಿತ್ತು. ಆಫೀಸಿನ ವಿಳಾಸ, ನಾಲ್ಕು ಟೆಲಿಫೋನು ನಂಬರುಗಳಿದ್ದವು. ಅಂತೂ ಅದೃಷ್ಟ ಕೈಹಿಡಿಯೊ ಲಕ್ಷಣ ಕಾಣತಿದೆ. ಆ ಕ್ಯಾರೆಕ್ಟರಿಗೆ ತಾನು ಆಯ್ಕೆಯಾಗಲೇಬೇಕು, ಆಗೇ ಆಗತೀನಿ ಅನ್ನುವ ಹಟ ಮೂಡುತ್ತ ಮನಸ್ಸು ಅರಳಿತು. ಅದೇ ಉಲ್ಲಾಸದಲ್ಲಿ, ಕಂಠೀರವ ಸ್ಟುಡಿಯೊಗೆ ಹೋಗುವುದು ಬೇಡ ಅಂದುಕೊಂಡು, ಒಂದು ಸಿನಿಮಾ ನೋಡಿ ಮನೆಗೆ ಬಂದಳು. ರಾತ್ರಿ ಊಟಮಾಡಿ ಮಂಜುಳಾಳೊಂದಿಗೆ ಮುಕ್ತವಾಗಿ ಹರಟಿದಳು. ರಾತ್ರಿ ಸುಖನಿದ್ದೆ.

**'ನೀವು ಸ್ವಿಮ್ಮಿಂಗ್ ಡ್ರೆಸ್ಸಿನಲ್ಲಿ ಬರಬೇಕು. ಅಂದ್ರೆ ನಿಮ್ಮ ಒಳಉಡಪಿನಲ್ಲಿ ಬನ್ನಿ, ಈಗ ಸಾಕು.' ಕಣ್ಣರಳಿಸಿದಳು. 'ನೀವು ನಾಯಕಿಪಾತ್ರದೋರು, ಎಲ್ಲಾ ಉಡುಪುಗಳಿರುತ್ತವೆ. ಸಿನಿಮ ನೋಡಿಲ್ಲದೋರ? ವೈಜಯಂತಿಮಾಲಾರ ಸಂಗಂ, ಶರ್ಮಿಳಾರ ಇವನಿಂಗ್ ಇನ್ ಪ್ಯಾರಿಸ್ ನೋಡಿಲ್ವ? ಈಗಿನ ಯಾವ ಸಿನಿಮಾದಲ್ಲಿಲ್ಲ?' ಛೇಡಿಸಿದಂತಾಯಿತು. 'ತೇಜಾಬ್'ನಲ್ಲಿ ಮಾಧುರಿಯೇ ಮಾಡಿದ್ದಳಲ್ಲ...**

ಬೆಳಿಗ್ಗೆ ಎದ್ದವಳು ಸ್ನಾನಮಾಡಿ, ಮೇಕಪ್ ಸಾಮಗ್ರಿಗಳನ್ನು ಪ್ಯಾಕ್ ಮಾಡಿದಳು. ಒಂದು ಸೀರೆ, ಚೂಡಿದಾರ್ ಮತ್ತು ಜೀನ್ಸ್ ಸೆಟ್‌ಗಳೊಂದಿಗೆ ಟೀಶರ್ಟನ್ನು ಬ್ಯಾಗಿಗೆ ತುಂಬಿಕೊಂಡು ಹೊರಬಿದ್ದಳು. ಬಸ್ಸಲ್ಲಿ ಕೂದಲು ಕೆದರಿ ಮೇಕಪ್ ಹಾಳಾಗುತ್ತದೆ, ಮೇಲಿಂದ ಬ್ಯಾಗಿದೆ. ರಿಕ್ಷಾಕ್ಕೆ ನೂರಾರು ತೆರಬೇಕು. ಈಗಾಗಲೆ ಸುಮಾರು ಖಾಲಿಯಾಗಿದೆ ಅನಿಸಿತು. ಆದರೆ, ಇಂತಾ ಸಮಯದಲ್ಲಿ ಹಿಂದೆಮುಂದೆ ನೋಡಬಾರದು. ಕ್ಲಿಕ್ಕಾದರೆ ಕಾರನ್ನೆ ಖರೀದಿಸಬಹುದು ಅಂದುಕೊಂಡವಳು ರಿಕ್ಷಾಕ್ಕೆ ಕೈಮಾಡಿದಳು. ವಿಜಯನಗರದಲ್ಲಿ ದೊಡ್ಡ ಬಂಗಲೆ, ಸುತ್ತಲು ಕಾಂಪೌಂಡು. ಎಡತುದಿಯ ಬಾಗಿಲು ಮುಚ್ಚಿತ್ತು. ಬಲತುದಿಯ ಗಾಜಿನಬಾಗಿಲ ಮೇಲೆ